# <u>ಮನವ ಶೋಧಿಸಬೇಕು ನಿಚ್ಚ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. The wordings here are similar to Ref. 2 except few differences which are not considered here.
4. **Note:** The lyrics given in Ref. 2 (given without highlights) are almost similar to that of the singer. But the lyrics are slightly different in Ref. 1. They are given separately in green highlights.

ರಾಗ: ನಾದನಾಮಕ್ರಿಯೆ ತಾಳ: ಅಟ್ಟ

| | |
|---|---|
| ಮನವ ಶೋಧಿಸಬೇಕು ನಿಚ್ಚ ದಿನ | ಮನವ ಶೋಧಿಸಬೇಕು ನಿಚ್ಚ ದಿನ |
| ದಿನ ಮಾಡುವ ಪಾಪ ಪುಣ್ಯದ ವೆಚ್ಚ ॥ ಪ ॥ | ದಿನ ಮಾಡುವ ಪಾಪ ಪುಣ್ಯದ ವೆಚ್ಚ |
| | |
| ಧರ್ಮ ಅಧರ್ಮ ವಿಂಗಡಿಸಿ ಅ- | ಧರ್ಮ ಅಧರ್ಮ ವಿಂಗಡಿಸಿ ದು- |
| ಧರ್ಮದ ನರಗಳ ಬೇರ ಕತ್ತರಿಸಿ | ಷ್ಕರ್ಮಕೆ ಏರಿದ ಬೇರ ಕತ್ತರಿಸಿ |
| ನಿರ್ಮಲಾಚಾರದಿ ಚರಿಸಿ ಪರ | ನಿರ್ಮಲಾಚಾರದಿ ಚರಿಸಿ ಪರ |
| ಬೊಮ್ಮ ಮೂರುತಿ ಪಾದ ಕಮಲವ ಭಜಿಸಿ ॥ ೧ ॥ | ಬೊಮ್ಮ ಮೂರುತಿ ಪಾದ ಕಮಲವ ಭಜಿಸಿ |
| | |
| ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ | ತನುವ ದಂಡಿಸಿ ಒಮ್ಮೆ ಮಾಣೊ ನಿನ್ನ |
| ಮನವ ದಂಡಿಸಿ ಪರಮಾತ್ಮನ್ನ ಕಾಣೋ | ಮನವ ದಂಡಿಸಿ ಪರಮಾತ್ಮನ ಕಾಣೊ |
| ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ | ನೀನು ನಿನ್ನೊಳಗೆ ಜಾಣನೊ ಮುಕುತಿ |
| ನಿನಗೆ ದೂರಿಲ್ಲವು ಒಂದೇ ಗೇಣೋ ॥ ೨ ॥ | ಏನೂ ದೂರಿಲ್ಲವೊ ಒಂದೇ ಗೇಣೊ |
| | |
| ಆತನ ಭಕುತರಿಗೆ ಕೇಡಿಲ್ಲ ಅವ | ಆತನ ಭಕ್ತರಿಗೆ ಕೇಡಿಲ್ಲ ಅವ |
| ಪಾತಕ ಪತಿತ ಸಂಗವ ಮಾಡುವನಲ್ಲ | ಪಾತಕ ಪತಿತ ಸಂಗವ ಮಾಡ-ಸಲ್ಲ |

ನೀತಿವಂತರು ಕೇಳಿರೆಲ್ಲ ನಮ-
ಗಾತನೆ ಗತಿಯೀವ ಪುರಂದರ ವಿಠಲ ॥ ೩ ॥

ನೀತಿವಂತರು ಕೇಳಿರೆಲ್ಲ ನಮ-
ಗೀತನೆ ಗತಿಯೀವ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮನವ ಶೋಧಿಸಬೇಕು ನಿಚ್ಚ** = ಅಂತರಂಗ ಶೋಧನೆಯೆಂಬ ವಿವರ. ಅಷ್ಟಾಂಗ ಯೋಗದಲ್ಲಿ ಪ್ರಾಣಾಯಾಮದನಂತರ ವಿಹಿತವಾದ ಪ್ರತ್ಯಾಹಾರ. ಮನಸ್ಸನ್ನು ಇಂದ್ರಿಯಗಳಿಂದ ಸೆಳೆದುಕೊಂಡು ತನ್ನಲ್ಲೇ ಗಮನವನ್ನು ಹರಿಸಿ ಅನುಕೂಲ ಪ್ರತಿಕೂಲ ಪ್ರವೃತ್ತಿಗಳನ್ನು ವಿಂಗಡಿಸಿ ಕೊಂಡು ಹೇಯ-ಹಾನ-ಹಾನೋ ಪಾಯಗಳೆಂಬ ವಿಧಿಯಿಂದ ಮನಸ್ಸನ್ನು ಸಮಾಧಿಗೆ ಉಪಯುಕ್ತವನ್ನಾಗಿ ಮಾರ್ಪಡಿಸಿ ಕೊಳ್ಳುವುದು.

**ನಿಚ್ಚ** = ನೀಚ

**ಬೊಮ್ಮ ಮೂರುತಿ** = ಪರಬ್ರಹ್ಮ, ಬಿಂಬರೂಪ

**ತನುವ ಖಂಡಿಸಿ** = ದೇಹದ ನೆನಪನ್ನು ಅಳಿಸಿ (ಸಮಾಧಿಯಲ್ಲಿ)

**ಮಾಣೋ** = ದೇಹ ವ್ಯಾಪಾರವನ್ನು ನಿಲ್ಲಿಸು

**ಮಾನವ ದಂಡಿಸಿ** = ಮನಸ್ಸಿನ ವಿಷಯ ಪ್ರಾವಣ್ಯವನ್ನು ತಪ್ಪಿಸಿ, ಬಿಗಿ ಹಿಡಿದು.

**ಜಾಣೋ** = ತಿಳಿದುಕೋ (ಜಾಣ್)

**ಮುಕ್ತಿ ಒಂದೇ ಗೇಣೋ** = ಬಿಂಬನ ಸ್ಥಾನವು ಹೃದಯ ಕಮಲವಾಗಿದ್ದು, ಪ್ರತಿಬಿಂಬನಾದ ಜೀವನ ಸ್ಥಾನವು ಆಜ್ಞಾ ಚಕ್ರವಾದುದರಿಂದ ಎರಡಕ್ಕೂ ನಡುವೆ ಇರುವ ದೂರ ಒಂದು ಗೇಣು ಅಷ್ಟೇ. ಜೀವನು ಹೃದಯದಲ್ಲಿ ಬಿಂಬಾ ಪರೋಕ್ಷವನ್ನು ಪಡೆದುಕೊಳ್ಳುವುದೇ ಮುಕ್ತಿ.

**ಗತಿಯೀವ** = ಮುಕ್ತಿಯನ್ನು ನೀಡುವವ.

**ಪಾಪ** = ವೆಚ್ಚ …… ಪಾಪ ಮಾಡುವದರಿಂದ ಪುಣ್ಯದಲ್ಲಿ ಕೊರತೆಯಾಗುತ್ತದೆ

**ಏರಿದ** = ಉಂಟಾದ

**ಆಚಾರಾದಿ ಚರಿಸಿ** = ಶುಧ್ಧ ನಡತೆಯುಳ್ಳವನಾಗಿ

**ನೀನು ನಿನ್ನೊಳಗೆ ಜಾಣನೋ** = ಆತ್ಮ ಜ್ಞಾನವನ್ನು ತಾನೆ ಪಡೆಯಬೇಕು. ಬೇರೆಯವರಿಂದ ಅಲ್ಲ.

**ಪಾತಕ** = ಪಾಪಿ

**ಪತಿತ** = ಭ್ರಷ್ಟ

**Classification:** Keerthane
**Ankita:** purandara vittala
**Location:** NA
**Category:** mukti marga, jeevanoddhara, bimba rupa
**Sub-Category:** papa, punya, dharma, nara, jiva, Nirmala, parabrahma, mukti, chakra, hrudaya, padma, bimba, pratibimba, paramatma
**Pravachana:** NA
**Explanation:** NA